MVC No. 518/2019 PW-3

**ದಿನಾಂಕ 26.10.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ವಕೀಲರಿಂದ ಃ

ಮೃತ ಕರಿಯಪ್ಪ ನನ್ನ ಅಣ್ಣ. ಅರ್ಜಿದಾರರು ನನ್ನ ಅತ್ತಿಗೆ ಮತ್ತು ಅವರ ಮಕ್ಕಳು. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ನಾನು ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣದಲ್ಲಿ ಇಂತಹದ್ದೇ ವಾಹನ ಬಂದು ನನ್ನ ಅಣ್ಣನಿಗೆ ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿಲ್ಲ. ನನ್ನ ಅಣ್ಣನನ್ನು ನಿಮಾನ್ಸ್ ಆಸ್ಪತ್ರೆಗೆ ನಾನೇ ಕರೆದುಕೊಂಡು ಹೋಗಿದ್ದು ಸದರಿ ಆಸ್ಪತ್ರೆಯ ವೈದ್ಯರ ಬಳಿ ಇಂತಹದ್ದೇ ವಾಹನ ಬಂದು ನನ್ನ ಅಣ್ಣನಿಗೆ ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿಲ್ಲ. ನಾನು ನಿಮಾನ್ಸ್ ಆಸ್ಪತ್ರೆಯಲ್ಲಿ ಮೃತ ಕರಿಯಪ್ಪ ರವರು ರಸ್ತೆ ದಾಟುತ್ತಿದ್ದು ಅವರಿಗೆ ಯಾವುದೋ ಗೊತ್ತಿಲ್ಲದೇ ಇದ್ದ ವಾಹನ ಡಿಕ್ಕಿ ಪಡಿಸಿಕೊಂಡು ಹೋಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಗೊತ್ತಿಲ್ಲ. ಅಪಘಾತ ಪಡಿಸಿದ ವಾಹನವನ್ನು ಅಮಾನತ್ತು ಪಡಿಸಿಕೂಂಡಾಗ ನನ್ನನ್ನು ಪೋಲಿಸರು ಕರೆದಿದ್ದರು ನಾನು ಪೋಲಿಸ್ ಠಾಣೆಯಲ್ಲಿ ವಾಹನವನ್ನು ನೋಡಿರುತ್ತೇನೆ. ನಾನು ಪೋಲಿಸರಿಗೆ ದೂರನ್ನು ಕೊಡುವಾಗ ಸದರಿ ಅಪಘಾತ ಪಡಿಸಿದ ವಾಹನ ಪೋಲಿಸ್ ಠಾಣೆಯಲ್ಲಿತ್ತು. ನಾನು ಮೊದಲು ನನ್ನ ಅಣ್ಣನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಬಂದು ದೂರನ್ನು ನೀಡಿರುತ್ತೇನೆ. 1 ನೇ ಎದುರುದಾರರಾದ ಚಿಕ್ಕಬಸವ ಬಿನ್ ಲೇಟ್ ಬಸವಯ್ಯನವರು  ನಮ್ಮ ಊರಿನವರು . 1 ನೇ ಎದುರದಾರರ ಮೋಟಾರ್ ಸೈಕಲ್ ಈ ಅಪಘಾತದಲ್ಲಿ ಭಾಗಿಯಾಗಿಲ್ಲ ನಾನು ಮತ್ತು 1 ನೇ ಎದುರುದಾರರು ಹಾಗೂ ಪೋಲಿಸರು ಶಾಮೀಲಾಗಿ 1 ನೇ ಎದುರುದಾರರ ವಾಹನದ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಮೋಟಾರ್ ಸೈಕಲ್ ಸಂಖ್ಯೆ ಗೊತ್ತಿರಲಿಲ್ಲ ಆದ್ದರಿಂದ ನಾನು ಯಾವುದೇ ಆಸ್ಪತ್ರೆಗಳಲ್ಲಿ ಅಂದರೆ ಚನ್ನಪಟ್ಟಣ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಹಾಗೂ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯಲ್ಲಿ ವಾಹನದ ನೊಂದಣಿ ಸಂಖ್ಯೆಯನ್ನು  ಹೇಳಿರಲಿಲ್ಲ ಎಂದರೆ ಹೌದು. ನನ್ನ ಅಣ್ಣನವರು

ತೀರಿಕೊಂಡಿದ್ದರಿಂದ ನನ್ನ ಅತ್ತಿಗೆ ಮತ್ತು ಅವರ ಮಕ್ಕಳಿಗೆ ಪರಿಹಾರ ಸಿಗಲೀ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.